ಸಂಪುಟ : 40 ಸಂಚಿಕೆ 134 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 10 ಜೂನ್ 2017 ಶನಿವಾರ POST REG NO . L-2/RNP- 364/TMR/2015-17 ಪುಟಗಳು : 10 ಬೆಲೆ ₹ 2.50

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

ಪ್ರಜಾ ಪ್ರಗತಿ

ತುಮಕೂರು | Tumakuru

ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com

ತೆರಿಗೆ ರಿಟರ್ನ್ಸ್‌ಗೆ ಆಧಾರ್, ಪಾನ್ ಕಾರ್ಡ್ ಲಿಂಕ್ ಕಡ್ಡಾಯಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ

ಶೀಘ್ರದಲ್ಲೇ ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡುತ್ತೇನೆ: ಮಾಜಿ ಸಂಸದ ಹೆಚ್.ವಿಶ್ವನಾಥ್

ನೈರುತ್ಯ ಮುಂಗಾರು ರಾಜ್ಯ ಪ್ರವೇಶ : ಭಾರೀ ಮಳೆಯಾಗುವ ಸಾಧ್ಯತೆ

10 ಸಾವಿರ ಶಿಕ್ಷಕರ ನೇಮಕ ಶೀಘ್ರ

ಅತಿಥಿ ಶಿಕ್ಷಕರ ನೇಮಕ: ಕೆಎಟಿ ತಡೆಯಾಜ್ಞೆ ತೆರವಿಗೆ ಸರ್ಕಾರ ಕ್ರಮ

ಬೆಂಗಳೂರು

ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ 10 ಸಾವಿರ ಶಿಕ್ಷಕರನ್ನು ಶೀಘ್ರ ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಇದಕ್ಕಾಗಿ ಅಗತ್ಯ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ತನ್ವೀರ್ ಸೇಠ್ ಮೇಲ್ಮನೆಗೆ ತಿಳಿಸಿದರು.

ಬಿಜೆಪಿಯ ತಾರಾ ಅನುರಾಧ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಉಳಿದ ಇಲಾಖೆಗಳಲ್ಲಿ ಸರಾಸರಿ ಶೇ. 50ರಷ್ಟು ಹುದ್ದೆಗಳು ಖಾಲಿ ಇವೆ, ಆದರೆ, ನಮ್ಮ ಇಲಾಖೆಯಲ್ಲಿ ಮಾತ್ರ ಕಾಲ ಕಾಲಕ್ಕೆ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ ಎಂದರು.

ರಾಜ್ಯದಲ್ಲಿ 18 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇದ್ದವು. ಅದರಲ್ಲಿ 7905 ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಇನ್ನುಳಿದ ಹುದ್ದೆಗಳ ಪೈಕಿ ಈ ವರ್ಷ 10 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ನಿರ್ಧರಿಸಲಾಗಿದೆ. ಶಿಕ್ಷಕರ ಕೊರತೆ ಇರುವ ಕಡೆ ಅತಿಥಿ ಶಿಕ್ಷಕರನ್ನು ನೇಮಿಸುತ್ತಿದೆ. ಆದರೆ ಇತ್ತೀಚೆಗೆ 1685 ಪ್ರೌಢ ಶಾಲಾ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದು, ಅದಕ್ಕೆ ಕೆಎಟಿ ತಡೆಯಾಜ್ಞೆ ನೀಡಿದೆ. ಅದನ್ನು ತೆರವು ಮಾಡುವ ನಿಟ್ಟಿನಲ್ಲಿ ಸರ್ಕಾರ ಎಲ್ಲ ಕ್ರಮಗಳನ್ನು ಕೈಗೊಳ್ಳಲಿದೆ.

-ತನ್ವೀರ್ ಸೇಠ್, ಸಚಿವ

ರಾಜ್ಯದಲ್ಲಿ 18 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇದ್ದವು. ಅದರಲ್ಲಿ 7905 ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಇನ್ನುಳಿದ ಹುದ್ದೆಗಳ ಪೈಕಿ ಈ ವರ್ಷ 10 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ನಿರ್ಧರಿಸಲಾಗಿದೆ. ಶಿಕ್ಷಕರ ಕೊರತೆ ಇರುವ ಕಡೆ ಅತಿಥಿ ಶಿಕ್ಷಕರನ್ನು ನೇಮಿಸುತ್ತಿದೆ. ಆದರೆ ಇತ್ತೀಚೆಗೆ 1685 ಪ್ರೌಢ ಶಾಲಾ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದು, ಅದಕ್ಕೆ ಕೆಎಟಿ ತಡೆಯಾಜ್ಞೆ ನೀಡಿದೆ. ಅದನ್ನು ತೆರವು ಮಾಡುವ ನಿಟ್ಟಿನಲ್ಲಿ ಸರ್ಕಾರ ಎಲ್ಲ ಕ್ರಮಗಳನ್ನು ಕೈಗೊಳ್ಳಲಿದೆ ಎಂದರು.

ಜೆಡಿಎಸ್‌ನ ಸರವಣ ಅವರ ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಸಚಿವರುರಾಜ್ಯದಲ್ಲಿ 252 ಕಿರಿಯ, ಹಿರಿಯ ಪ್ರಾಥಮಿಕ ಪ್ರೌಢಶಾಲೆಗಳ ಕಟ್ಟಡಗಳು ಶಿಥಿಲಗೊಂಡಿವೆ. ಶಿಥಿಲಗೊಂಡ ಕಟ್ಟಡಗಳನ್ನು ನೆಲಸಮಗೊಳಿಸಲು ಆದೇಶಿಸಲಾಗಿದೆ 2017-18ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳ ದುರಸ್ಥಿ ಹಾಗೂ ಶಿಥಿಲಗೊಂಡ ಕೊಠಡಿಗಳ ಮರುನಿರ್ಮಾಣಕ್ಕೆ 153.41 ಕೋಟಿ ರೂ. ಗಳನ್ನು ನಿಗದಿಪಡಿಸಲಾಗಿದೆ ಎಂದು ವಿವರಿಸಿದರು. ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ 363 ಹೆಚ್ಚುವರಿ ಶಾಲಾ ಕೊಠಡಿಗಳ ನಿರ್ಮಾಣಕ್ಕೆ 2.631 ಕೋಟಿ ರೂ. ಗಳು ಹಾಗೂ 336 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ 642 ಕೊಠಡಿಗಳ ದುರಸ್ಥಿಗೆ 6 ಕೋಟಿ 28 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ. ಕೊಠಡಿಗಳ ನಿರ್ಮಾಣ ಹಾಗೂ ದುರಸ್ಥಿ ಕಾಮಗಾರಿಗಳು ಈಗಾಗಲೇ ಪ್ರಗತಿಯಲ್ಲಿವೆ ರಾಜ್ಯದಲ್ಲಿ 43,185 ಪ್ರಾಥಮಿಕ ಶಾಲೆಗಳು, 4,486 ಸರ್ಕಾರಿ ಪ್ರೌಢಶಾಲೆಗಳು ಸ್ವಂತ ಕಟ್ಟಡಗಳನ್ನು ಹೊಂದಿವೆ ಎಂದು ಉತ್ತರಿಸಿದರು.

ತಾಂತ್ರಿಕ ಶಿಕ್ಷಣ ಇಲಾಖೆ ನೌಕರರ ನಿವೃತ್ತಿ ವೇತನವನ್ನು ತಡೆಹಿಡಿಯುತ್ತಿಲ್ಲ, ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಅವರು ಬಿಜೆಪಿಯ ಅರುಣಾ ಶಹಪುರ ಅವರ ಪ್ರಶ್ನೆಗೆ ಸ್ಪಷ್ಟಪಡಿಸಿದರು.

ತಾಂತ್ರಿಕ ಶಿಕ್ಷಣ ಇಲಾಖೆ ನೌಕರರ ನಿವೃತ್ತಿ ವೇತನವನ್ನು ನ್ಯಾಯಾಲಯದ ಅಂತಿಮ ತೀರ್ಮಾನಕ್ಕೆ ಒಳಪಟ್ಟು, ನಿವೃತ್ತಿ ವೇತನವನ್ನು ತಡೆಹಿಡಿಯಲಾಗುತ್ತಿದೆ ಎಂದು ಸದನಕ್ಕೆ ತಾವು ನೀಡಿದ್ದ ಉತ್ತರವನ್ನು ವಾಪಸು ಪಡೆದು ಯಾವುದೇ ವೇತನವನ್ನು ತಡೆಹಿಡಿದಿಲ್ಲ ಎಂದು ಸ್ಪಷ್ಟಪಡಿಸಿದರು.

» 5ನೇ ಪುಟಕ್ಕೆ

1.88 ಕೋಟಿ ಯುವಜನತೆಗೆ ಕೌಶಲ್ಯ ತರಬೇತಿ ನೀಡುವ ಗುರಿ

ಬೆಂಗಳೂರು

ಮುಂಬರುವ 2030 ರ ವೇಳೆಗೆ 16 ರಿಂದ 35 ವರ್ಷ ವಯೋಮಾನದವರಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಸುಮಾರು 1.88 ಕೋಟಿ ಯುವಜನತೆಗೆ ಕೌಶಲ್ಯ ತರಬೇತಿ ನೀಡುವ ಗುರಿ ಹೊಂದಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಬೆಂಗಳೂರು, ಮೈಸೂರು, ದಾಂಡೇಲಿ ಮತ್ತು ಕಲಬುರಗಿ ಉಪ ಕೇಂದ್ರಗಳನ್ನು ಶ್ರೇಷ್ಠತಾ ಕೇಂದ್ರಗಳನ್ನು ರೂಪಿಸಲು ಸೀಮೆನ್ಸ್ ಇಂಡಸ್ಟ್ರಿ ಸಾಫ್ಟ್‌ವೇರ್‌ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದ ನಂತರ ಮಾತನಾಡಿದ ಅವರು, ರಾಜ್ಯದಲ್ಲಿ ಪ್ರತಿ ವರ್ಷ 11 ಲಕ್ಷ ವಿದ್ಯಾವಂತರು ಉದ್ಯೋಗ ಬಯಸಿ ಹೊರ ಬರುತ್ತಿದ್ದಾರೆ. ಪಿ.ಯು.ಸಿ. ಡಿಪ್ಲೋಮಾ ಐ.ಟಿ.ಐ. ಹಾಗೂ ಇಂಜಿನಿಯರಿಂಗ್ ಪದವಿ ಪಡೆದ ವಿದ್ಯಾರ್ಥಿಗಳಿಗೆ ಉದ್ಯೋಗಕ್ಕೆ ಅನುಕೂಲವಾಗುವಂತೆ ಇಂದಿನ ಅಗತ್ಯಕ್ಕೆ ತಕ್ಕಂತೆ ತರಬೇತಿ ನೀಡುವುದು ಅವಶ್ಯಕವಾಗಿದೆ. ಅದನ್ನು ಗಮನದಲ್ಲಿಟ್ಟುಕೊಂಡು ಜಾಗತಿಕ ಮಟ್ಟದ ತರಬೇತಿ ನೀಡುವುದರ ಜೊತೆಗೆ ಅವರಿಗೆ ಉದ್ಯೋಗ ಕಲ್ಪಿಸುವುದರ ಮೂಲಕ ನಿರುದ್ಯೋಗ ಸಮಸ್ಯೆ ತೊಡೆದು ಹಾಕುವುದು ಸರ್ಕಾರದ ಉದ್ದೇಶವಾಗಿದೆ ಎಂದು ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ ಸುಮಾರು 5 ಲಕ್ಷ ಯುವಕ, ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಗುರಿ ಹೊಂದಲಾಗಿದ್ದು ಕೇವಲ 21 ದಿನಗಳಲ್ಲಿ 6 ಲಕ್ಷ ಅಭ್ಯರ್ಥಿಗಳು ತರಬೇತಿ ಬಯಸಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿದ್ದಾರೆ, ಪ್ರತಿ ವರ್ಷ 13 ಲಕ್ಷ ಜನರಿಗೆ ತರಬೇತಿ ನೀಡಲಾಗುವುದು ಎಂದರು.

ಆಟೋಮೋಟಿವ್, ಏರೋಸ್ಪೇಸ್, ರಕ್ಷಣೆ, ಇಂಡಸ್ಟ್ರಿಯಲ್ ಮೆಷಿನರಿ, ರಿನಿವಬಲ್ ಎನರ್ಜಿ ವಿಭಾಗಗಳಲ್ಲಿ ಒಟ್ಟು 2031.80 ಕೋಟಿ ರೂ. ಗಳ ಒಟ್ಟು ಒಡಂಬಡಿಕೆಯಾಗಲಿದೆ. ಅದರಲ್ಲಿ ಸೀಮೆನ್ಸ್ ಸಂಸ್ಥೆಯ ಪಾಲು 1822.48 ಕೋಟಿ ರೂ. ಆಗಿದ್ದು ಹಾಗೂ ರಾಜ್ಯ ಸರ್ಕಾರದ ಪಾಲು 219.32 ಕೋಟಿ ರೂ. ಆಗಿದೆ ಎಂದರು.

₹55 Discount Per Gram
Gold 916 ₹ 2745/-
Silver ₹ 41000/-
ಸೌರ ಜ್ಯುಯಲರ್ಸ್
Ashoka Road, Tumkur
Ph: 0816 4022274

ಅಕ್ಕಿ ಕಲಬೆರಕೆ: ಕಳವಳ

ಬೆಂಗಳೂರು

ಅನ್ನ ಭಾಗ್ಯ ಯೋಜನೆಯಡಿ ಪ್ಲಾಸ್ಟಿಕ್ ಅಕ್ಕಿ ಕಲಬೆರಕೆ ಆಗುತ್ತಿರುವ ಬಗ್ಗೆ ವಿಧಾನಸಭೆಯಲ್ಲಿ ಕಳವಳ ವ್ಯಕ್ತವಾಯಿತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ರಮೇಶ್ ಕುಮಾರ್ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಯು.ಟಿ.ಖಾದರ್ ಈ ವಿಚಾರದಲ್ಲಿ ವಿರೋಧಾಭಾಸದ ಹೇಳಿಕೆ ಗಳನ್ನು ನೀಡಿದ್ದು ಮತ್ತಷ್ಟು ಗೊಂದಲ ಮೂಡುವಂತಾಯಿತು. ಪ್ರತಿಪಕ್ಷ ನಾಯಕ ಜಗದೀಶ್ ಶೆಟ್ಟರ್ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿ, ಮಾಧ್ಯಮಗಳಲ್ಲಿ ಈ ಬಗ್ಗೆ ವರದಿಯಾಗುತ್ತಿದೆ. ಸತ್ಯಾಂಶ ಏನು ತಿಳಿಸಬೇಕು. ಜನ ಈ ಬಗ್ಗೆ ಆತಂಕಗೊಂಡಿದ್ದಾರೆ ಎಂದರು. ಮೊದಲು ಉತ್ತರ ನೀಡಿದ ಸಚಿವ ರಮೇಶ್ ಕುಮಾರ್ ಅವರು, ಈ ಬಗ್ಗೆ ತಮ್ಮ ಬಳಿ ಮಾಹಿತಿ ಇಲ್ಲ, ಸೋಮವಾರದ ವರೆಗೆ ಸಮಯ ಕೊಡಿ. ಕೆಲವು ಕಡೆ ದಿಢೀರ್ ದಾಳಿ ನಡೆಸಿ ಪರಿಶೀಲನೆ ಮಾಡುತ್ತೇವೆ. ಜತೆಗೆ ಪ್ಲಾಸ್ಟಿಕ್ ಅಕ್ಕಿ ತಯಾರಿಕೆ ಸಾಧ್ಯವೇ ಎಂಬುದನ್ನೂ ತಿಳಿದುಕೊಳ್ಳುತ್ತೇನೆ ಎಂದರು. ಮಧ್ಯಪ್ರವೇಶಿಸಿದ ಸಚಿವ ಯು.ಟಿ.ಖಾದರ್, ಪ್ಲಾಸ್ಟಿಕ್ ಅಕ್ಕಿ ಕಲಬೆರಕೆ ಸಾಧ್ಯವೇ ಇಲ್ಲ, ಮೇಲಾಗಿ ಅನ್ನಭಾಗ್ಯ ಯೋಜನೆಗೆ ಅಕ್ಕಿ ವಿತರಣೆ ಮಾಡುವುದು ಕೇಂದ್ರದ ಆಹಾರ ನಿಗಮ. ಹೀಗಾಗಿ ಕಲಬೆರಕೆ ಆದರೆ ಅದು ಅವರ ತಪ್ಪು ಎಂದರು. ಯು.ಟಿ. ಖಾದರ್ ಅವರ ಈ ಹೇಳಿಕೆಯನ್ನು ಬಿಜೆಪಿ ಶಾಸಕ ಸಿ.ಟಿ.ರವಿ ಸ್ವಾಗತಿಸಿದರು. ಈಗಲಾದರೂ ಅನ್ನಭಾಗ್ಯ ಯೋಜನೆ ಕೇಂದ್ರ ಪ್ರಾಯೋಜಿತ ಯೋಜನೆ ಎಂದು ಸಚಿವರು ಒಪ್ಪಿಕೊಂಡಂತಾಯಿತು ಎಂದು ಕಾಲೆಳದರು. ಯಾವುದೇ ರಾಜ್ಯ ಸರ್ಕಾರ ಅಕ್ಕಿ ಉತ್ಪಾದನೆ ಮಾಡುವುದಿಲ್ಲ, ಕೇಂದ್ರದಿಂದಲೇ ಅಕ್ಕಿ ಸರಬರಾಜು ಮಾಡಬೇಕು ಎಂದರು.

ಆದಾಯ ತೆರಿಗೆಗೆ ಆಧಾರ್ ಕಡ್ಡಾಯ: ಸುಪ್ರೀಂಕೋರ್ಟ್ ತಡೆಯಾಜ್ಞೆ

ನವದೆಹಲಿ: ಪ್ಯಾನ್‌ಕಾರ್ಡ್ ಹಂಚಿಕೆ ಹಾಗೂ ಆದಾಯ ತೆರಿಗೆ ರಿಟರ್ನ್ ಸಲ್ಲಿಸುವ ವೇಳೆ ಆಧಾರ್‌ಸಂಖ್ಯೆಯನ್ನು ಕಡ್ಡಾಯಗೊಳಿಸುವ ಅದಾಯ ತೆರಿಗೆ ಕಾಯ್ದೆಯ ನಿಯಮಗಳ ಅನುಷ್ಠಾನಕ್ಕೆ ಸುಪ್ರೀಂ ಅಂಶಿಕವಾಗಿ ತಡೆಯಾಜ್ಞೆ ನೀಡಿದೆ. ಅದಾಯತೆರಿಗೆ ಕಾಯ್ದೆಯ ಸೆಕ್ಷನ್ 139 ಎಎ ಸಿಂಧುತ್ವವನ್ನು ಎತ್ತಿಹಿಡಿದಿರುವ ಅಪೆಕ್ಸ್ ಕೋರ್ಟ್, ಆಧಾರ್ ಯೋಜನೆ ವ್ಯಕ್ತಿಗಳ ಖಾಸಗಿ ಹಕ್ಕು ಉಲ್ಲಂಘಿಸುತ್ತಿದೆಯೇ ಮತ್ತು ಡಾಟಾ ಸೋರಿಕೆ ಬೆದರಿಕೆ ಕುರಿತ ಸಂವಿಧಾನ ಪೀಠದ ಮುಂದಿರುವ ಅರ್ಜಿಗಳ ಕುರಿತ ತೀರ್ಪಿಗೆ ಒಳಪಟ್ಟಿರುತ್ತದೆ ಎಂದು ಹೇಳಿದೆ. ನ್ಯಾಯಮೂರ್ತಿ ಎ.ಕೆ.ಸಿಕ್ರಿ ಹಾಗೂ ಅಶೋಕ್ ಭೂಷಣ್ ಅವರನ್ನೊಳಗೊಂಡ ನ್ಯಾಯಪೀಠ ಈ ಕುರಿತ ಕಾನೂನು ರೂಪಿಸುವ ಸಂಸತ್ತಿನ ಶಾಸಕಾಂಗ ಸಾಮರ್ಥ್ಯವನ್ನು ಎತ್ತಿ ಹಿಡಿದಿದೆ. ಸಂವಿಧಾನ ಪೀಠ ಪರಿಶೀಲಿಸುತ್ತಿರುವ ಆಧಾರ್ ಯೋಜನೆಯಿಂದ ಮಾನವ ಘನತೆಯ ಮೇಲಿನ ಪರಿಣಾಮ ಹಾಗೂ ಖಾಸಗಿ ಹಕ್ಕಿನ ಅಂಶಗಳನ್ನು ತಾನು ಪರ್ಯಾಲೋಚಿಸುವುದಿಲ್ಲ ಎಂದು ಪೀಠ ಸ್ಪಷ್ಟಪಡಿಸಿದೆ. ಆಧಾರ್ ಯೋಜನೆಯಿಂದ ಡಾಟಾ ಸೋರಿಕೆಯಾಗದಂತೆ ಖಾತ್ರಿಪಡಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನ್ಯಾಯಪೀಠ ಸರ್ಕಾರಕ್ಕೆ ಸೂಚಿಸಿದೆ.

ಅದಾಯ ತೆರಿಗೆ ಕಾಯ್ದೆ ಹಾಗೂ ಆಧಾರ್ ಕಾಯ್ದೆನಡುವೆ ಯಾವುದೇ ಸಂಘರ್ಷಗಳಿಲ್ಲ ಎಂದು ನ್ಯಾಯ ಪೀಠ ಸ್ಪಷ್ಟಪಡಿಸಿದೆ. ಖಾಸಗಿ ಹಕ್ಕಿನ ವಿಷಯವನ್ನು ಸಂವಿಧಾನ ಪೀಠ ನಿರ್ಧರಿಸುವವರೆಗೆ ಅಧಾರ್ ಸಂಖ್ಯೆ ಜೋಡಿಸದ ಪ್ಯಾನ್ ಕಾರ್ಡ್ ಅಮಾನ್ಯಗೊಳಿಸಬಾರದು ಎಂದು ನ್ಯಾಯಾಲಯ ಆದೇಶಿಸಿದೆ.ಅಧಾರ್ ಸಂಬಂಧಿಸಿದ ಖಾಸಗಿ ಹಕ್ಕಿನ ವಿಷಯ ಇತ್ಯರ್ಥವಾಗುವವರೆಗೆ ಅಂಶಿಕ ತಡಯಾಜ್ಞೆಯಿಂದ ಹಿಂದಿನ ವಹಿವಾಟುಗಳಮೇಲೆ ಪರಿಣಾಮ ಉಂಟಾಗುವುದಿಲ್ಲ, ರದ್ದಾಗುವುದಿಲ್ಲ ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

ಕೇಂದ್ರ- ರಾಜ್ಯ ಸರ್ಕಾರಗಳ ವಿರುದ್ಧ ರೈತ ಸಂಘ ಪ್ರತಿಭಟನೆ

ನಗರದಲ್ಲಿ ರಸ್ತೆ ತಡೆ, ಮಾನವ ಸರಪಳಿ

ತುಮಕೂರು

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ರೈತ ವಿರೋಧಿ ನೀತಿಯನ್ನು ವಿರೋಧಿಸಿ ಹಾಗೂ ಮಧ್ಯ ಪ್ರದೇಶದಲ್ಲಿ ರೈತರ ಮೇಲೆ ಗೋಲಿಬಾರ್ ನಡೆಸಿರುವುದನ್ನು ಖಂಡಿಸಿ ಜಿಲ್ಲಾ ರೈತ ಸಂಘದ ನೇತೃತ್ವದಲ್ಲಿ ಶುಕ್ರವಾರ ಅಪರಾಹ್ನ ತುಮಕೂರು ನಗರದ ಬಿ.ಜಿ. ವೃತ್ತದಲ್ಲಿ ರೈತರು ರಸ್ತೆ ತಡೆ ನಡೆಸಿ, ಮಾನವ ಸರಪಳಿ ರಚಿಸಿ ಆಕ್ರೋಶ ವ್ಯಕ್ತಪಡಿಸಿದರು.

ಅಪರಾಹ್ನ 12 ಗಂಟೆಯಿಂದ ಸುಮಾರು 15 ನಿಮಿಷಗಳ ಕಾಲ ಈ ಪ್ರತಿಭಟನೆ ನಡೆದ ಪರಿಣಾಮ, ಟೌನ್‌ಹಾಲ್ ವೃತ್ತದ ನಾಲ್ಕೂ ದಿಕ್ಕುಗಳಲ್ಲಿ ವಾಹನ ಸಂಚಾರ ಸ್ಥಗಿತಗೊಂಡು ಕೆಲಕಾಲ ಸಂಚಾರ ವ್ಯವಸ್ಥೆ ಅಸ್ತವ್ಯಸ್ತಗೊಂಡಿತು. ಪೊಲೀಸ್ ಅಧಿಕಾರಿಗಳು ಪದೇ ಪದೇ ಮಾಡಿಕೊಂಡ ಮನವಿಗೆ ರೈತ ಮುಖಂಡರು ಒಪ್ಪಿಕೊಂಡು ಮಾನವ ಸರಪಳಿ ಕೈಬಿಟ್ಟು ವೃತ್ತದ ಮಧ್ಯೆ ಸೇರಿದುದರಿಂದ ಮತ್ತೆ ವಾಹನ ಸಂಚಾರ ಸಹಜ ಸ್ಥಿತಿಗೆ ಮರಳಿತು.

ಸ್ವಾಮಿನಾಥನ್ ವರದಿ ಜಾರಿಗೆ ತನ್ನಿ: ಈ ಸಂದರ್ಭದಲ್ಲಿ ರೈತರನ್ನುದ್ದೇಶಿಸಿ ಮಾತನಾಡಿದ ಜಿಲ್ಲಾ ರೈತ ಸಂಘದ ಅಧ್ಯಕ್ಷ ಎ. ಗೋವಿಂದರಾಜು ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು. ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆ ನೀಡಬೇಕು. ಮಿಗಿಲಾಗಿ ಕೇಂದ್ರ ಸರ್ಕಾರವು ಸ್ವಾಮಿನಾಥನ್ ವರದಿಯನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ
ಹಾಗೂ ಹಸಿರು ಸೇನೆ
ತುಮಕೂರು ಜಿಲ್ಲೆ

ಮಧ್ಯ ಪ್ರದೇಶ ಸರ್ಕಾರವು ಪ್ರತಿಭಟನಾನಿರತ ರೈತರ ಮೇಲೆ ಗೋಲಿಬಾರ್ ನಡೆಸಿ, ರೈತರನ್ನು ಬಲಿ ತೆಗೆದುಕೊಂಡಿರುವುದನ್ನು ಅವರು ಉಗ್ರವಾಗಿ ಖಂಡಿಸಿದರು.

ತುಮಕೂರು ಜಿಲ್ಲೆಯ ವಿಷಯ ಪ್ರಸ್ತಾಪಿಸಿದ ಗೋವಿಂದರಾಜು, ಜಿಲ್ಲೆಯಲ್ಲೂ ಭೀಕರ ಬರಗಾಲವಿದೆ. ನೀರಿಗಾಗಿ ಹಾಹಾಕಾರ ಉಂಟಾಗಿದೆ. ತೆಂಗು- ಅಡಿಕೆ ಬೆಳೆಗಳು ನಾಶವಾಗಿ ಬೆಳೆಗಾರರು ತೀವ್ರ ಸಂಕಷ್ಟಕ್ಕೊಳಗಾಗಿದ್ದಾರೆ. 1200 ಅಡಿಗಳಷ್ಟು ಆಳಕ್ಕೆ ಕೊಳವೆಬಾವಿ ಕೊರೆದರೂ, ನೀರು ಲಭಿಸದಿರುವ ಸನ್ನಿವೇಶವನ್ನು ರೈತರು ಎದುರಿಸುವಂತಾಗಿದೆ. ಜೊತೆಗೆ ಸಾಲದ ಭಾರವನ್ನೂ ಹೊರಬೇಕಿದ್ದು, ಇಂತಹ ಪರಿಸ್ಥಿತಿಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ ಎಂದು ಆತಂಕದಿಂದ ವಿವರಿಸಿದರು.

ರೈತರನ್ನು ಹತ್ತಿಕ್ಕಲು ಸಾಧ್ಯವಿಲ್ಲ : ಜನಾಂದೋಲನ ಮಹಾ

» 6ನೇ ಪುಟಕ್ಕೆ

ಉದ್ಘಾಟನೆಗಷ್ಟೇ ಸೀಮಿತವಾಗುತ್ತಿವೆ ಯೋಜನೆಗಳು ತಿಪಟೂರು:ವೇಗ ಕಾಣದ ಕಾಮಗಾರಿಗಳು

◆ ಉಜ್ಜಜ್ಜಿ ರಾಜಣ್ಣ
ತಿಪಟೂರು

ಬೈಯ್ದುಕೊಳ್ಳುವವರು ತೀರಾ ಅಸಮಾಧಾನ ಮಾಡಿಕೊಂಡರೂ ಸರಿಯೇ ತಮ್ಮ ಬೇಜವಾಬ್ದಾರಿತನ, ಹೊಣೆಗೇಡಿತನ ಹಾಗೂ ನಿರ್ಲಕ್ಷ್ಯತನಗಳನ್ನು ಮಾತ್ರ ಬದಲಾವಣೆ ಮಾಡಿಕೊಳ್ಳಲಾರರು ಎಂಬಂತೆ ಸಾರ್ವಜನಿಕ ಆಡಳಿತದಲ್ಲಿ ಯಾವುದೇ ಬದಲಾವಣೆಯನ್ನೂ ಮಾಡಿಕೊಳ್ಳದೆ ತಾಲ್ಲೂಕಿನ ಜನಪ್ರತಿನಿಧಿಗಳು ತಮ್ಮ ಅಧಿಕಾರದ ಅವಧಿಯನ್ನು ಮುಂದುವರೆಸಿದ್ದಾರೆ.

2018ರ ವಿಧಾನಸಭಾ ಚುನಾವಣೆ ಹತ್ತಿರ ಬಂದ ಹಾಗೆ ಈಗಾಗಲೇ ಅಸಮಾಧಾನ ಮಾಡಿಕೊಂಡಿರುವ ವಿವಿಧ ರಾಜಕೀಯ ಪಕ್ಷಗಳ ಕಾರ್ಯಕರ್ತರು, ಮುಖಂಡರು ನಾಯಕರ ವಿರುದ್ಧವೇ ಸೇಡು ತೀರಿಸಿಕೊಳ್ಳಲು ಸಜ್ಜಾಗುತ್ತಿರುವರು. ಹೀಗಾಗಿ ಅಸಮಾಧಾನ ಮಾಡಿಕೊಂಡಿರುವ ರಾಜಕೀಯ ಮುಖಂಡರಿಗೆ ಈಗ ತಿಪಟೂರು ವಿಧಾನಸಭಾ ಕ್ಷೇತ್ರದಲ್ಲಿ ಬಹಳ ಬೇಡಿಕೆ ಬಂದಿರುವಂತೆ ಕಾಣಿಸುತ್ತಿದೆ.

ಮಂಜೂರು ಮಾಡುವ ಅಧಿಕಾರ ಹೊಂದಿರುವ ನಮಗೆ ಹಂಚಿಕೆ ಮಾಡುವ ಅಧಿಕಾರ ಇದೆ ಎಂದು ತಮ್ಮ ಆಡಳಿತದ ಅವಧಿಯುದ್ದಕ್ಕೂ ರಾಜಕೀಯ ಪರಮಾಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ತಾಲ್ಲೂಕಿನ ರಾಜಕಾರಣಿಗಳು ಕ್ಷೇತ್ರದ ಅಭಿವೃದ್ಧಿಗೆ ಮಗ್ಗಲು ಮುಳ್ಳಾಗಿ ಕೂತಿರುವರು.

ಗುತ್ತಿಗೆದಾರರು, ಇಂಜಿನಿಯರ್‌ಗಳು ಹಾಗೂ ಅಧಿಕಾರಿಗಳ ಆಡೊಂಬೊಲವಾಗಿ ಮಾರ್ಪಟ್ಟಿರುವ ತಿಪಟೂರು ವಿಧಾನಸಭಾ ಕ್ಷೇತ್ರ ಅಭಿವೃದ್ಧಿಯ ವಿನ್ಯಾಸ ಹರಿದು ಹಂಚಿ ಹೋಗಿರುವುದು. ಸರ್ಕಾರ ನೀಡಿರುವ ಅನುದಾನಗಳು ರದ್ದಿ ಪೇಪರ್‌ಗಳ ಹಾಗೆ ಹರಿದು ಹಳ್ಳ ಸೇರಿವೆ.

ತಾಲ್ಲೂಕಿನಲ್ಲಿ ತೆಂಗಿನ ಮರಗಳ ತಲೆ ಬಿದ್ದು ಹೋಗಿವೆ. ಅಡಿಕೆಯ ಮರಗಳು ಬುಡದಿಂದ ಸುಳಿಯವರೆಗೂ ಒಣಗಿ ತೋಟಗಳೊಳಗೆ ಉದ್ದನೆಯ ಗೂಟಗಳಂತೆ ನಿಂತಿವೆ. ಜಾನುವಾರುಗಳಿಗೆ ಮೇವು, ನೀರು ಒದಗಿಸಲಾಗದೆ ರೈತರು ಕರಡಾಳು ಸಂತೆಯಲ್ಲಿ ತೂಕದ ಲೆಕ್ಕಕ್ಕೆ ಮಾರಾಟ ಮಾಡುವ ಧಾರುಣ ಪರಿಸ್ಥಿತಿ ಇದೆ. ಕೊರಳ ಕಣ್ಣಿಯನ್ನು ಕಳಚಿಕೊಂಡು ಅಗ್ಗದ ಕಾಸಿಗೆ ರಾಸುಗಳನ್ನು ಮಾರುತ್ತಿರುವ ರೈತರಿಗೆ ಕರುಳು ಕಿತ್ತು ಬರುವಂತಹ ಕಷ್ಟಗಳು ಎದುರಾಗಿರುವುವು. ರಾಜಕಾರಣಿಗಳ ಲೆಕ್ಕಾಚಾರಗಳು ಲಾಭದಾಯಕವಾಗಿವೆ. ಜನರ ಲೆಕ್ಕಾಚಾರಗಳು ಬುಡಮೇಲಾಗಿವೆ.

ಹಾರೆಕೋಲು, ಪಿಕಾಶಿ, ಗುದ್ದಲಿ ಹಿಡಿದು ಉದ್ಘಾಟನೆ ಮಾಡಿಸಿಕೊಂಡು ಬೀಳುಬಿದ್ದಿರುವ ಕಾಮಗಾರಿಗಳೇ ಹೆಚ್ಚಾಗಿ ನಳನಳಿಸುತ್ತಿವೆ. ಕಾಮಗಾರಿ ಪೂರ್ಣಗೊಂಡು ಸಾರ್ವಜನಿಕರ ಉಪಯೋಗಕ್ಕೆ ಒದಗಿಬಂದಿರುವ ಕೆಲಸಗಳು ಕೇವಲ ಬೆರಳೆಣಿಕೆಯಷ್ಟು ಮಾತ್ರ.

ಅಧಿಕಾರಿಗಳು ಹೊಗಳು ಭಟ್ಟರು, ಜನಪ್ರತಿನಿಧಿಗಳು ರಾಜರೆಂಬಂತಾಗಿ ಮಾಸಿದ ಬಟ್ಟೆಯ ಬಡವರಿಗೆ ಗ್ರಾಮ ಪಂಚಾಯತಿಗಳಲ್ಲಿ, ಕಚೇರಿಗಳಲ್ಲಿ ಸಕಾಲಕ್ಕೆ ಒಂದು ಪಹಣಿ ಪತ್ರಿಕೆಯೂ ದೊರೆಯದಂತಾಗಿರುವುದು. ರೈತರು ಗೋಗರೆದು ಹಕ್ಕು ದಾಖಲಾತಿಗಳನ್ನು ಕೇಳಿದರೆ ಅಧಿಕಾರಿಗಳು ಹೇಳುವುದು ಒಂದೇ ಉತ್ತರ ಕಂಪ್ಯೂಟರ್ ಸರ್ವರ್ ಪ್ರಾಬ್ಲಂ.

ಬಹು ಗ್ರಾಮಗಳ ಕುಡಿಯುವ ನೀರಿನ ಯೋಜನೆಯಿಂದ ಹಿಡಿದು ಹೊನ್ನವಳ್ಳಿ ಏತ ನೀರಾವರಿ ಯೋಜನೆಯವರೆವಿಗೂ ಹಾಗೂ ಇತ್ತೀಚೆಗೆ ನೆಲದೊಳಗೆ ಹೂತಿದ್ದ ಅಸ್ಥಿ ಪಂಜರಗಳನ್ನು ಮೇಲೆತ್ತಿ ನಿಲ್ಲಿಸಿರುವ ಹಾಗೆ ಗೋಚರಿಸುತ್ತಿರುವ ಶುದ್ಧ ಕುಡಿಯುವ ನೀರಿನ ಘಟಕಗಳವರೆವಿಗೂ ಕುಡಿಯುವ ನೀರಿನ ವ್ಯವಸ್ಥೆಗಳು ಹದಗೆಟ್ಟು ಕೂತಿವೆ. ತಾಂತ್ರಿಕ ವೈಫಲ್ಯ ಹಾಗೂ ನಿರ್ವಹಣೆ ಇಲ್ಲದೆ ನರಳುತ್ತಿರುವ ಕುಡಿಯುವ ನೀರಿನ ಯೋಜನೆಗಳನ್ನು ಜನತೆಗೆ ಅನುಕೂಲಕರವಾಗಿ ರೂಪಿಸಿದ ತಾಲ್ಲೂಕು ತಾಂತ್ರಿಕ ಇಲಾಖೆಗಳ ಸೆಕ್ಷನ್ ಆಫೀಸರ್ಸ್ ಹಾಗೂ ಮುಖ್ಯಸ್ಥರು ಜನಪ್ರತಿನಿಧಿಗಳಿಗೆ ಜಿಹುಜೂರ್ ಎಂದು ಕಾಲ ತಳ್ಳುತ್ತಿರುವರು.

ಆಡಳಿತದ ಶಕ್ತಿ ಕೇಂದ್ರ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆನ್‌ಲೈನ್ ಮಾರುಕಟ್ಟೆ ಪದ್ಧತಿಯನ್ನು ಮುಖ್ಯಮಂತ್ರಿಗಳ ಜೊತೆ ಉದ್ಘಾಟಿಸಿ ಬಂದವರು ಸದರಿ ಪದ್ಧತಿಯನ್ನು ತಿಪಟೂರು ಎಪಿಎಂಸಿಯಲ್ಲಿ ಹಾಳುಗೆಡವಿದರು. ಕೊಬ್ಬರಿ

» 6ನೇ ಪುಟಕ್ಕೆ

ವಾಸಿಸುವವನೇ ಒಡೆಯ:ಮಸೂದೆ ರಾಷ್ಟ್ರಪತಿ ಅಂಗಳಕ್ಕೆ

ಬೆಂಗಳೂರು

ಕರ್ನಾಟಕ ಭೂಕಂದಾಯ ಕಾಯ್ದೆಗೆ ತಿದ್ದುಪಡಿ ತಂದು ತಾಂಡಾ ಮತ್ತು ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ,ವಾಸಿಸುವವನೇ ಮನೆಯೊಡೆಯ ಎಂದು ರೂಪಿಸಿದ ಕಾಯ್ದೆಯನ್ನು ರಾಷ್ಟ್ರಪತಿಗಳಿಗೆ ಕಳಿಸಲಾಗಿದ್ದು ಇದನ್ನು ಅಂಗೀಕರಿಸುವಂತೆ ರಾಷ್ಟ್ರಪತಿಗಳನ್ನು ಒತ್ತಾಯಿಸಲು ಸಧ್ಯದಲ್ಲೇ ದೆಹಲಿಗೆ ಹೋಗುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಹೇಳಿದ್ದಾರೆ.

ಈ ಕುರಿತು ಸದಸ್ಯ ರಾಜೀವ್ ಮಂಡಿಸಿದ ನಿಲುವಳಿಯ ಮೇಲಿನ ಚರ್ಚೆಗೆ ಉತ್ತರಿಸಿದ ಅವರು, ಸದರಿ ತಿದ್ದುಪಡಿ ಕಾಯ್ದೆಯನ್ನು ರಾಷ್ಟ್ರಪತಿಗಳಿಗೆ ಕಳಿಸುವ ಮುನ್ನ ಅಡ್ವೋಕೇಟ್ ಜನರಲ್‌ಗೆ ಕಳಿಸಿ ಕಾನೂನು ಸಲಹೆ ಪಡೆಯಲಾಗಿದೆಯೇ ಹೊರತು ಬೇರ್‍ಯಾವ ಕಾರಣ ದಿಂದಲೂ ಅಲ್ಲ ಎಂದು ಸಮರ್ಥನೆ ಮಾಡಿಕೊಂಡರು.

ರಾಜ್ಯಪಾಲರಿಗೆ ಇದನ್ನು ಕಳಿಸಿದರೂ ಅದನ್ನವರು ಅಂಗೀಕಾರಕ್ಕಾಗಿ ರಾಷ್ಟ್ರಪತಿಗಳಿಗೆ ಕಳಿಸುತ್ತಿದ್ದರು. ಹೀಗಾಗಿ ಅವರನ್ನು ಅವಮಾನಿಸುವ ಪ್ರಶ್ನೆಯೇ ಇಲ್ಲ,ಹಾಗೆಯೇ ಭೂಕಂದಾಯ ಕಾಯ್ದೆಗೆ ತಿದ್ದುಪಡಿ ತಂದು ವಾಸಿಸುವವನೇ ಮನೆ ಒಡೆಯ ಎಂದು ತೀರ್ಮಾನ ಕೈಗೊಂಡ ಮೇಲೆ ಕಾನೂನು ಸಲಹೆಗಾಗಿ ಅಡ್ವೋಕೇಟ್ ಜನರಲ್‌ಗೆ ಕಳಿಸಲಾಗಿತ್ತು.ಮುಂದಿನ ದಿನಗಳಲ್ಲಿ ಯಾವುದೇ ಕಾನೂನು ತೊಡಕುಗಳು ಬರಬಾರದು ಎಂಬುದು ಇದಕ್ಕೆ ಕಾರಣವೇ ಹೊರತು ಬೇರೇನಲ್ಲ ಎಂದು ಸಮರ್ಥಿಸಿಕೊಂಡರು.

ಇದೇ ಸಂದರ್ಭದಲ್ಲಿ ಕಾನೂನು ಸಚಿವ ಟಿ.ಬಿ.ಜಯಚಂದ್ರ ಕೂಡಾ ಮಾತನಾಡಿ,ಒಂದು ತಿದ್ದುಪಡಿ ಕಾಯ್ದೆಯನ್ನು ರೂಪಿಸುವ ಮುನ್ನ,ರೂಪಿಸಿದ ನಂತರ ಕಾನೂನು ಸಲಹೆ ಪಡೆಯುವುದು ಸಾಮಾನ್ಯ

» 10ನೇ ಪುಟಕ್ಕೆ

BIGGEST FURNITURE & AUTOMOBILE EXHIBITION
The Great Wheels
Maximum Brands Under One Roof
Date : 09-06-2017 TO 13-06-2017
FURNITURE TODAY
Exhibition on Furniture, Interiors & Much More...
Huge Variety
Big Discounts
Visit Today!
KNS Mill Ground, Kunigal Main Road, Tumkur.
(NEAR SBI BANK)